

ನೀತಾ ರಾವ್

ಕಲೆ: ವೆಂಕಟ್ರಮಣ ಭಟ್

# ಇಳಿಜಾರು

ಇಳಿಸಂಜೆಯ ಹೊತ್ತಿಗೆ ಅವರ ಬಸ್ಸು ಶಾಲೆ (Chalet) ಎಂಬ ಮರದ ಮನೆಯ ಮುಂದೆ ಬಂದು ನಿಂತಕೂಡಲೇ ಎಲ್ಲರೂ ಗಡಿಬಿಡಿಯಿಂದ ಇಳಿದು ತಮ್ಮ ತಮ್ಮ ಲಗೇಜ್ ಬ್ಯಾಗ್‌ಗಳನ್ನು ಇಳಿಸಿಕೊಂಡು ಒಳನಡೆದರು. ಬೇಗ ರೂಮಿನ ಬೀಗದ ಕೈ ಪಡೆದು ಒಂದೆರಡು ಘಳಿಗೆ ಅಡ್ಡಾಗಿ ಆಯಾಸ ಕಡಿಮೆ ಮಾಡಿಕೊಳ್ಳುವ ಆತುರ ಎಲ್ಲರ ಮುಖದಲ್ಲೂ ಇಣುಕುತ್ತಿತ್ತು. ರಸ್ತೆಗಳು ಎಷ್ಟೇ ನುಣುಪಾಗಿರಲಿ, ನಾಲ್ಕಾರು ಗಂಟೆಗಳ ಬಸ್ ಪ್ರಯಾಣ ಮೈಕೈಯನ್ನು ನುಜ್ಜು ಮಾಡದಿರಲಾರದು. ಶಾಲಿನಿಯೂ ರೂಮಿನ ಬಾಗಿಲು ತೆಗೆದು ಒಳಸಾರಿದ ತಕ್ಷಣ ಹಾಸಿಗೆಯಲ್ಲಿ ಮೈ ಹರವಿ ಬಿದ್ದುಕೊಂಡಳು. ದೊಡ್ಡ ಡಬಲ್ ಕಾಟಿನ ಮೇಲೆ ಮೃದುವಾದ ಹಾಸಿಗೆ. ಒಳಗೆಲ್ಲ ರೆಗ್ಸಿನ್ ತುಂಬಿದ ಮೆತ್ತಗಿನ ದಪ್ಪ ಬ್ಲ್ಯಾಂಕೆಟನ್ನು ಮುಖದವರೆಗೆ ಎಳೆದುಕೊಂಡು ಹಿತವಾದ ಬೆಚ್ಚಗಿನ ಅನುಭವವನ್ನು ಹೀರಿಕೊಳ್ಳುತ್ತ ಕಣ್ಮುಚ್ಚಿದಳು. ಒಂದೆರಡು ನಿಮಿಷಗಳಲ್ಲೇ ನಿದ್ರೆ ಅವಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಹೊರಗೆ ಬಾಲ್ಕನಿಯಲ್ಲಿ ಎದುರುಬದುರಾಗಿ ಇಟ್ಟ ಸುಂದರವಾದ ಆರಾಮ ಕುರ್ಚಿಗಳಲ್ಲಿ ಕುಳಿತು ತಾವೇ ರೂಮಿನಲ್ಲಿ ಬಿಸಿ ಮಾಡಿಕೊಂಡ ನೀರಿಗೆ ಹಾಲಿನ ಪುಡಿ, ಸಕ್ಕರೆಪುಡಿಯನ್ನು ಸೇರಿಸಿ ಟೀ ಬ್ಯಾಗನ್ನು ಕಪ್ಪಿನೊಳಗೆ ಇಳಿಬಿಟ್ಟು ಕದಡಿ ಕದಡಿ ಒಂದೊಂದೇ ಗುಟುಕನ್ನು ಚಪ್ಪರಿಸುತ್ತಿದ್ದರು ಇಂದೂ ಮತ್ತು ಜಾನು. ಭಾರತೀಯರಿಗೆ ಖುಷಿ ಕೊಡುವ ಕಡುಬಣ್ಣದ ಸ್ಟ್ರಾಂಗ್ ಟೀ ಅಲ್ಲ ಅದು. ಆದರೆ, ಇಲ್ಲಿ ಇದಕ್ಕಿಂತ ಉತ್ಕೃಷ್ಟವಾದ ಟೀ ಸಿಗಲಾರೆಂಬುದು ಮನವರಿಕೆಯಾಗಿದೆ ಅವರಿಗೆ. ಹಾಗಾಗಿ ಸದ್ಯ ಕರುಳನ್ನು ಬೆಚ್ಚಗಿರಿಸಲು ಅದನ್ನೇ ಗಂಟಲಿಗಿಳಿಸುತ್ತ ಕಣ್ಣೆದುರು ಹರಡಿಕೊಂಡ ಆಲ್ಪ್ಸ್ ಪರ್ವತ ಶ್ರೇಣಿಗಳ ನೆತ್ತಿಗಳ ಮೇಲೆಲ್ಲ ಬಿದ್ದ ಹಿಮವು ಇಳಿ ಸೂರ್ಯನ ಹೊಂಗಿರಣಗಳನ್ನು ಪ್ರತಿಫಲಿಸುವ ಪರಿಯನ್ನು ಕಣ್ಣೊಳಗೆ ಇಳಿಸುತ್ತಿದ್ದರು ಅವರಿಬ್ಬರೂ.

ಅರ್ಧ ಗಂಟೆ ಕಳೆಯುವುದರಲ್ಲಿ ಟೂರ್ ಮ್ಯಾನೇಜರ್ ಮಮತಾ ಇಂಟರ್‌ಕಾಮಿನಲ್ಲಿ ಕರೆ ಮಾಡಿ ಇನ್ನರ್ಧ ಗಂಟೆಯಲ್ಲಿ ಎಲ್ಲರೂ ಕೆಳಗೆ ಡೈನಿಂಗ್ ರೂಮಿಗೆ ಬರಬೇಕೆಂದು ಹೇಳಿದಾಗ ಆಗಷ್ಟೇ ಆರೂವರೆ ಆಗಿತ್ತು. ಇಂದೂ, ಶಾ ನ್ನು ಎಬ್ಬಿಸಲು ಅವಳ ಬ್ಲ್ಯಾಂಕೆಟ್ ಎಳೆದ ಮೇಲೆ ನಿಧಾನವಾಗಿ ಕಣ್ಣು ಬಿಡುತ್ತ ಎದ್ದವಳು ಬಿಸಿ ಬಿಸಿ ನೀರಿನಲ್ಲಿ ಮುಖ ತೊಳೆದು ಒಂದಿಷ್ಟು ಪೌಡರ್ ಸವರಿಕೊಂಡಳು. "ಇವತ್ತು ಊಟಕ್ಕೆ ಮೊದಲು ಒಂದಿಷ್ಟು ಮೋಜು–ಮಸ್ತಿ ಇದೆ. ಫಾರ್ ಎ ಚೇಂಜ್ ಸೀರೆ ಉಟ್ಟಕೊಂಡು ಹೋಗೋಣ" ಎಂದಳು ಜಾನಕಿ. "ಅಯ್ಯೋ ಬ್ಯಾಡ ಮಾರಾಯ್ತಿ. ಕೊರೆಯೋ ಚಳಿಯಲ್ಲಿ ಸೀರೆ ಉಟ್ಟು ಮೇಲೆ ಸ್ವೆಟರು, ಜರ್ಕಿನ್ ಎಲ್ಲಾ ಹಾಕಲಿಕ್ಕಾಗೋದಿಲ್ಲ. ಸುಮ್ನೆ ಜೀನ್ಸ್ ಹಾಕ್ಕೋಳೋದೇ